ಶ್ರೀ ಶಿವಾನಂದ ಪಾಟೀಲ್:– ನೀವು ಹೀಗೆ ಮಾಡಿದರೆ ಈ ರೀತಿ ಆಗುತ್ತದೆ.

ಅಧ್ಯಕ್ಷರು:– ಏನು ವರ್ಷವಿಡೀ ಸದನ ನಡೆಸುತ್ತೇವೆಯೇ? ಈ ವಾರ ಮತ್ತು ಮುಂದಿನ ವಾರ. ಸದಸದಲ್ಲಿ ಕುಳಿತುಕೊಳ್ಳಬೇಕು. ಮನೆಗೆ ಹೋಗಿ ಏನು ಮಾಡಬೇಕು?

263 (3521) ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾರಂಭ

ಶ್ರೀ ಶಿವಾನಂದ ಎಸ್ ಪಾಟೀಲ (ಬಸವನಬಾಗೇವಾಡಿ)

ಅ) ರಾಜ್ಯದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ಆರಂಭಿಸುವಂತೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹೊಸ ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಇ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಯಾವ ಯಾವ ವರ್ಷ ಯಾವ ಯಾವ ಸ್ಥಳಗಳಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿದೆ?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬಂದಿದೆ.

ಆ) ಇಲಾಖೆಯು 435 ಹೊಸ ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಕಾಲೇಜುಗಳನ್ನು ಪ್ರಾರಂಭಿಸಲು ಕೊಠಡಿಗಳ ನಿರ್ಮಾಣ, ಗ್ರಂಥಾಲಯ, ಪೀಠೋಪಕರಣಗಳು, ಹೊಸ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗಾಗಿ ಒಟ್ಟು ಅಂದಾಜು ರೂ. 539 ಕೋಟಿಗಳ ವೆಚ್ಚ ಆಗುತ್ತದೆ. ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯೊಡನೆ ಸಂಪರ್ಕಿಸಲಾಗಿ, ಆರ್ಥಿಕ ಇಲಾಖೆಯು, ಇದು ಬೃಹತ್ ಆರ್ಥಿಕ

ಹೊರೆಯ ಪ್ರಸ್ತಾವನೆ ಆಗಿರುತ್ತದೆ. ಈಗಾಗಲೇ ಪ್ರಾರಂಭಿಸಲಾದ ಪದವಿಪೂರ್ವ ಕಾಲೇಜುಗಳಿಗೆ ಬೇಕಾದ ಕಟ್ಟಡ, ಪ್ರಯೋಗಾಲಯ, ಉಪಕರಣಗಳು, ಗ್ರಂಥಾಲಯ, ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು, ನಂತರ ಹೊಸ ಪದವಿಪೂರ್ವ ಕಾಲೇಜು ಮಂಜೂರು ಮಾಡುವ ಬಗ್ಗೆ ಪರಿಶೀಲಿಸುವಂತೆ ಹಾಗೂ ಕೆಲವು ಅಂಶಗಳಿಗೆ ಮಾಹಿತಿಯನ್ನು ಒದಗಿಸುವಂತೆ ಆರ್ಥಿಕ ಇಲಾಖೆಯು ಕೋರಿರುತ್ತದೆ. ಈ ಪ್ರಕಾರ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಯಾವುದೇ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡಿರುವುದಿಲ್ಲ.

ಶ್ರೀ ಶಿವಾನಂದ ಎಸ್ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆ ಪ್ರಶ್ನೆಯನ್ನು ಕೇಳುವ ಉದ್ದೇಶವೇನೆಂದರೆ, ಪ್ರಾಥಮಿಕ ಹಂತದಲ್ಲಿ ಶಿಕ್ಷಣವನ್ನು ಪಡೆದುಕೊಂಡಿರುವಂತಹ ಮಕ್ಕಳು ಪ್ರೌಢ ಶಿಕ್ಷಣಕ್ಕೆ ಅನುಮತಿ ಪಡೆದುಕೊಳ್ಳವುದರಲ್ಲಿ ವಂಚಿತರಾಗುತ್ತಿದ್ದಾರೆ. ಈ ವಿಚಾರದಲ್ಲಿ ತಾವೇ ನನ್ನ ಪ್ರಶ್ನೆಗೆ ಒಂದು ಉತ್ತರ ಕೊಟ್ಟಿದ್ದೀರಿ. ಈ ಬಗ್ಗೆ ಸರ್ಕಾರದಿಂದ ಒಂದು ಮಾಹಿತಿಯನ್ನು ತರಿಸಿರುತ್ತೇನೆ. ನಮ್ಮಲ್ಲಿ 2011 ರ ಏಪ್ರಿಲ್‌ನಲ್ಲಿ 6,32,000 ಮಕ್ಕಳು ಎಸ್.ಎಸ್.ಎಲ್.ಸಿ. ವರೆಗೆ ಕಲಿತಿರುತ್ತಾರೆ. ಆದರೆ ಅದೇ ವರ್ಷ ಪಿಯುಸಿ ಗೆ ಹೋದಂತಹ ಮಕ್ಕಳ ಸಂಖ್ಯೆ 5,08,067 ಮಕ್ಕಳು. ಅಂದರೆ ಸುಮಾರು ಒಂದ ಲಕ್ಷ ಮಕ್ಕಳು ಶಾಲೆಯನ್ನು ಬಿಟ್ಟಿರುತ್ತಾರೆ. ಒಂದು ಕಡೆ ತಾವು ಪ್ರಾಥಮಿಕ ಹಂತದಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ಕೊಡುತ್ತೀರಿ. ಪ್ರೌಢಶಾಲೆಯಿಂದ ಪದವಿ ಪೂರ್ವ ಶಿಕ್ಷಣಕ್ಕೆ ಹೋಗಬೇಕಾದರೆ ಇಷ್ಟು ಮಕ್ಕಳು ಡ್ರಾಪ್ ಔಟ್ ಆಗುತ್ತಾರೆ. ಕಳೆದ ಮೂರು ವರ್ಷಗಳ ಅಂದರೆ 2011–2012, 2012–2013, 2013–2014 ನೇ ಸಾಲಿನ ಅಂಕಿ ಅಂಶಗಳನ್ನು ತರಿಸಿ ನೋಡಿದ್ದೇನೆ. ಕ್ರಮವಾಗಿ 2011–2012 ರಲ್ಲಿ ಒಂದು ಲಕ್ಷ ಮಕ್ಕಳು, 12–13 ರಲ್ಲಿ 50,000 ಮಕ್ಕಳು 13–14 ರಲ್ಲಿ 83,000 ಮಕ್ಕಳು ಮತ್ತು 2014–15 ರಲ್ಲಿ 74,000 ಮಕ್ಕಳು ಪಿಯು.ಸಿ.ಗೆ admission ಆಗಿರುವುದಿಲ್ಲ. ಇಷ್ಟು ಮಕ್ಕಳು ಪದವಿ ಪೂರ್ವ ಶಿಕ್ಷಣಕ್ಕೆ ಅನುಮತಿ ಪಡೆದುಕೊಳ್ಳದಿರಲು

ಕಾರಣವೇನೆಂದು ಮಾನ್ಯ ಸಚಿವರಲ್ಲಿ ಈ ಸದನದ ಮುಖಾಂತರ ಕೇಳಲಿಕ್ಕೆ ಇಚ್ಛಿಸುತ್ತಿದ್ದೇನೆ.

ಶ್ರೀ ಕಿಮ್ಮನೆ ರತ್ನಾಕರ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳುವುದೇನೆಂದರೆ ಒಂದು ಮಾತನ್ನು ಪ್ರಸ್ತಾಪ ಮಾಡುವುದೇನೆಂದರೆ 2006–07ರ ಸಾಲಿನ ನಂತರ ಕಳೆದ ಏಳೆಂಟು ವರ್ಷಗಳಲ್ಲಿ ಒಟ್ಟು ಮೂರು ಪದವಿ ಪೂರ್ವ ಕಾಲೇಜುಗಳನ್ನು ಮಾತ್ರ ಮಂಜೂರು ಮಾಡಿರುವ ಸತ್ಯವನ್ನು ಒಪ್ಪಿಕೊಳ್ಳುತ್ತಿದ್ದೇನೆ. 2008–09 ರಿಂದ as on today ಎರಡು ಪದವಿ ಪೂರ್ವ ಕಾಲೇಜುಗಳನ್ನು ಮಾತ್ರ ಮಂಜೂರು ಮಾಡಲಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಅಂದರೆ ಕಳೆದ ಎಂಟು ವರ್ಷಗಳಿಂದ ಯಾವುದೇ ಪದವಿ ಪೂರ್ವ ಕಾಲೇಜುಗಳು ಆಗಿಲ್ಲ. ಈ ವರ್ಷ ಯಾವುದೇ ಪದವಿ ಪೂರ್ವ ಕಾಲೇಜುಗಳನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಮುಂದಿನ ಅವಧಿಗೆ ತೆಗೆದುಕೊಳ್ಳಬೇಕೆನ್ನುವ ಯೋಚನೆ ಇದೆ. ಈ ಬಗ್ಗೆ ಪೂರ್ಣ ಮಾಹಿತಿಯನ್ನು ಸಹ ಪಡೆದುಕೊಂಡಿದ್ದೇನೆ. ಆದರೆ SSLC ಪಾಸಾದ ನಂತರ first year PUC admission ಕಡಿಮೆಯಿದೆ ಎನ್ನುವುದಕ್ಕೆ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಕಡಿಮೆಯಿರುವುದೇ ಮುಖ್ಯ ಕಾರಣವೆಂದು ಪೂರ್ಣವಾಗಿ ಹೇಳುವುದಕ್ಕಾಗುವುದಿಲ್ಲ. ಬೇರೆ ಬೇರೆ ಕಾರಣಗಳಿಂದಾಗಿ ಕೆಲವರು polytechnic, ಮತ್ತೊಂದಕ್ಕೆ ಹೋಗಿದ್ದರಿಂದ ಅದು ಕೂಡ ಸಾಧ್ಯತೆಯಿದೆ. ಖಂಡಿತವಾಗಿ ಎಲ್ಲಾ ಕಡೆ ಪಿ.ಯು. ಕಾಲೇಜುಗಳನ್ನು ಕೊಡಬೇಕೆಂದು ಸರ್ಕಾರದ ಇಚ್ಛೆಯಿದೆ. ಆರ್ಥಿಕ ನೀತಿಯ ನಿಯಂತ್ರಣದ ಆದೇಶವಿರುವುದರಿಂದ ಈ ವರ್ಷ ಅದನ್ನು ತೆಗೆದುಕೊಂಡಿಲ್ಲ. ಮುಂದಿನ ವರ್ಷ ಖಂಡಿತವಾಗಿ ಸರ್ಕಾರ ತೆಗೆದುಕೊಳ್ಳುತ್ತದೆ. ನಾವು ಮಾಹಿತಿಯನ್ನು collect ಮಾಡಿರುವ ಪ್ರಕಾರ ಸುಮಾರು 491 ಪದವಿಪೂರ್ವ ಕಾಲೇಜುಗಳ ಅಗತ್ಯವಿದ್ದು, ಈಗ 435 ಕೊಟ್ಟಿದ್ದೇವೆ. ನಂತರ ಕೆಲವು requisition ಮಾಡಿದರೆ ಹೆಚ್ಚು ಕಡಿಮೆ 435 ರ ಅಗತ್ಯವಿದೆ. ಖಂಡಿತ ಪರಿಶೀಲನೆ ಮಾಡಿ ಮುಂದಿನ ಅವಧಿಗೆ ಅದನ್ನು ಮಾಡುತ್ತೇವೆ. ಈ ವರ್ಷ

ಎಲ್ಲಿ ಪ್ರೌಢಶಾಲೆಗಳು ಕಡಿಮೆ ಇವೆ, ಅಲ್ಲಿ ಪ್ರೌಢಶಾಲೆಗಳನ್ನು ಒದಗಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇಷ್ಟೆ. ತಾವು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಹದಿನೇಳು ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡುತ್ತೀರಿ. ಎಲ್ಲಾ ಸೇರಿ 500 ಕೋಟಿ ರೂಗಳು. ಕಳೆದ ಎಂಟು ವರ್ಷದಿಂದ ಒಂದು ಪಿ.ಯು.ಸಿ. ಕಾಲೇಜುಗಳು ಪ್ರಾರಂಭವಾಗಿಲ್ಲ. ಇವರು ಕೇವಲ ಕಲಾ, ವಾಣಿಜ್ಯ ಕಾಲೇಜುಗಳನ್ನು ಮಾತ್ರ ಕೊಡುತ್ತಾರೆ. ವಿಜ್ಞಾನ ಕಾಲೇಜುಗಳು ಎಲ್ಲಿಯೂ ಇಲ್ಲ. ದುರ್ಗೈವ, ತಾಲೂಕು ಹೆಡ್‌ಕ್ವಾರ್ಟರ್‌ನಲ್ಲಿ ಪಿ.ಯು.ಸಿ. ವಿಜ್ಞಾನ ಕಾಲೇಜು ಇಲ್ಲ. ಬಡವರ ಮಕ್ಕಳು ವಿಜ್ಞಾನ, ಗಣಿತವನ್ನು ಕಲಿಯಬೇಕಾದರೆ ಅವರು drop outs. 15–20 ಸಾವಿರ ಕೋಟಿ ರೂ.ಗಳನ್ನು ತಾವು ಶಿಕ್ಷಣಕ್ಕೆ ಖರ್ಚು ಮಾಡುವಾಗ, ಕಳೆದ 5–6 ವರ್ಷಗಳಿಂದ 500 ಕೋಟಿ ರೂ.ಗಳನ್ನು ಖರ್ಚು ಮಾಡಿಲ್ಲ. ನಾನು ಒಂದೇ ವರ್ಷದಲ್ಲಿ ಖರ್ಚು ಮಾಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. At least ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಿಗೆ ಒಂದು ವಿಜ್ಞಾನ ಕಾಳೇಜುಗಳನ್ನು ಮಾಡುವುದಕ್ಕೆ ತಾವು ಮುಂದಿನ ವರ್ಷ ಕ್ರಮ ತೆಗೆದುಕೊಳ್ಳಿ. ಈ ವರ್ಷ ತಮಗೆ ಆರ್ಥಿಕ ಹೊರೆ ಇದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಈ ಕಡೆ ಮಾನ್ಯ ಸಚಿವರು ಗಮನ ಕೊಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ಖಂಡಿತವಾಗಿ ಅದಕ್ಕೆ ಗಮನ ಕೊಡುತ್ತೇವೆ. 2006–07 ರಿಂದ 2007–08 ಈ ಎರಡು ವರ್ಷದ ಅವಧಿಯಲ್ಲಿ ಸುಮಾರು 400 ಪದವಿಪೂರ್ವ ಕಾಲೇಜುಗಳನ್ನು ಮಾಡಿದ್ದಾರೆ. ಹಿಂದೆ 150 ಡಿಗ್ರಿ ಕಾಲೇಜುಗಳು ಪ್ರಾರಂಭವಾದವು. ಆ ಸಮಯದಲ್ಲಿ ಯಾವುದೇ ಪೂರ್ವಭಾವಿ ಹಣದ ಕೊರತೆ ಇರಲಿಲ್ಲ. ಆ ಕಾಲೇಜುಗಳಿಗೆ lecturer ಮತ್ತೊಂದು ಮೂಲಭೂತ ಸೌಕರ್ಯಗಳನ್ನು ಈಗ ಒದಗಿಸುತ್ತಿದ್ದೇವೆ. ಆದ್ದರಿಂದ ತೊಂದರೆ ಆಗಿದೆ. ಬೇರೆ ಕಾರಣಕ್ಕೆ ಅಲ್ಲ. ಈವರೆಗೂ ಕೂಡ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವುದಕ್ಕೆ ಆಗಿಲ್ಲ. ಒಂದು ಪದವಿ ಪೂರ್ವ ಕಾಲೇಜಿಗೆ

3 ಕೋಟಿ ರೂ. ಗಳ ಹಣ ಬೇಕು. Building, infrastructure ಎಲ್ಲ ಸೇರಿ ಒಂದು ಪ್ರೌಢಶಾಲೆಗೆ ಒಂದು ಕೋಟಿ ರೂ.ಗಳ ಹಣ ಬೇಕಾಗುತ್ತದೆ. ಆ ಕಾರಣದಿಂದಾಗಿ ವ್ಯತ್ಯಾಸವಾಗಿದೆ. ಖಂಡಿತ ಮುಂದಿನ ದಿನಗಳಲ್ಲಿ ಮಾಡುತ್ತೇವೆ.

ಶ್ರೀ ಕೆ.ಎಂ ಶಿವಲಿಂಗೇಗೌಡ :– ಮಾನ್ಯ ಅಧ್ಯಕ್ಷರೆ, 2006–07, 2007–08 ರಲ್ಲಿ ಮಾಡಿರುವುದು ಸತ್ಯ.

(ಗೋಂದಲ)

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್(ಇಂಡಿ):– ಮಾನ್ಯ ಅಧ್ಯಕ್ಷರೆ, ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ, ಉತ್ತರ ಕರ್ನಾಟಕದ ಇಂಡಿ ನಗರದಲ್ಲಿ ಒಂದು ಪಿ.ಯು.ಸಿ ಕಾಲೇಜು ಆಗಿರುವುದಿಲ್ಲ. ಮಾನ್ಯ ಸಚಿವರಿಗೂ ಕೂಡ ಅದು ಗೊತ್ತಿದೆ. 40,000 ಜನಸಂಖ್ಯೆ ಹೊಂದಿರುವ ನಗರದಲ್ಲಿ ...

ಅಧ್ಯಕ್ಷರು:– ಏನು ಮಾಡಬೇಕೆಂದು ಹೇಳಿ?

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ತಾಲ್ಲೂಕು ಹೆಡ್ ಕ್ವಾರ್ಟರ್‌ನಲ್ಲಿ ಪಿ.ಯು.ಸಿ ಕಾಲೇಜು ಇಲ್ಲ.

ಅಧ್ಯಕ್ಷರು:– ಮಾನ್ಯ ಸಚಿವರಿಗೆ ತಾವು ಮಾಡಿ ಎಂದು ಹೇಳಿ.

ಶ್ರೀ ಯಶವಂತಗೌಡ ವಿಠ್ಠಲಗೌಡ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಅದನ್ನೇ ಹೇಳುತ್ತಿದ್ದೇನೆ. 5 ವರ್ಷಗಳಿಂದ ಹಿಂದಿನ ಸಚಿವರು ಯಾರೂ ಇದರ ಬಗ್ಗೆ ಗಮನ ಕೊಟ್ಟಿಲ್ಲ.

ಅಧ್ಯಕ್ಷರು:– ಈಗ ತಾವು general ಆಗಿ ಹೇಳಿದ್ದೀರಿ. ಇಂಥ ಕಡೆ ಬೇಕೆಂದು ಕೇಳಿ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ್ದಾರೆ.

ಶ್ರೀ ಯಶವಂತಗೌಡ ವಿಠ್ಠಲಗೌಡ ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಿಗೆ specific ಆಗಿ ಕೇಳಿದ್ದೇನೆ. ಬೇಕಾದರೆ ಅವರಿಗೆ ಕೇಳಿ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ಪದವಿ ಪೂರ್ವ ಕಾಲೇಜುಗಳನ್ನು ಈ ವರ್ಷ ತೆಗೆದುಕೊಳ್ಳುವುದಾದರೆ, ಮೊದಲು ಇಂಡಿ ತಾಲ್ಲೂಕಿಗೆ ಹಾಕುತ್ತೇನೆಂದು ಹೇಳಿದ್ದೇನೆ. ಹಿಂದೆ ಏನು ಕಾಲೇಜುಗಳು ಮಂಜೂರು ಆಗಿದ್ದವು, ಅವುಗಳಿಗೆ ಇದುವರೆಗೂ ಹಣ ಒದಗಿಸುವುದೇ ಆಯಿತು.

ಶ್ರೀ ಕೆ.ಎಂ ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಆರ್ಥಿಕ ತೊಂದರೆ ಬಗ್ಗೆ ಹೇಳುತ್ತಿದ್ದಾರೆ. ಎಲ್ಲಿ ಅವಶ್ಯಕತೆ ಇಲ್ಲ, ಅಲ್ಲಿ ಪಿ.ಯು. ಕಾಲೇಜುಗಳು ಆಗಿವೆ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಆಗಿಲ್ಲ. 12–13 ವಿದ್ಯಾರ್ಥಿಗಳಿರುವ ಪಿ.ಯು. ಕಾಲೇಜುಗಳಿವೆ. ಬೇಕಾದರೆ ತಾವು ಪಟ್ಟಿಯನ್ನು ತರಿಸಿಕೊಳ್ಳಿ. ಇದಕ್ಕೆ ಏನಾದರೂ ಒಂದು merciless decision ತೆಗೆದುಕೊಳ್ಳಿ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಏನಾದರೂ ಮಾಡಿ. 12–13 ಜನ ವಿದ್ಯಾರ್ಥಿಗಳಿರುವ ಕಾಲೇಜಿನಲ್ಲಿ 16 ಜನ ಶಿಕ್ಷಕರು ಇರುವುದನ್ನು ನಾನು ನೋಡಿದ್ದೇನೆ. ಎಲ್ಲಿ ಎಂದು ನಾನು ಹೇಳಬಾರದು. ನಾನು ಹೇಳಿದರೆ ನಮ್ಮ ಮೇಲೆ ತಪ್ಪು ಬರುತ್ತದೆ. ತಾವು ಇಡೀ ರಾಜ್ಯದಲ್ಲಿ enquiry ಮಾಡಿಸಿ, ಯಾವ ಕಾಲೇಜುಗಳಲ್ಲಿ strength ಇಲ್ಲ, ಅಲ್ಲಿ merciless ಆಗಿ ನೀವು ತೆಗೆದುಕೊಂಡರೆ ಏನು ಆಗುವುದಿಲ್ಲ. ನಾವು ಹೇಳಬಾರದು.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಶಿವಲಿಂಗೇಗೌಡರೆ, ಅಂಥ ಕಾಲೇಜುಗಳನ್ನು shift ಮಾಡುವಂಥ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಸಚಿವರೆ, ಅಂಥ ಕಾಲೇಜುಗಳನ್ನು shift ಮಾಡಿ ಗುಲ್ಬರ್ಗಕ್ಕೆ ತೆಗೆದುಕೊಂಡು ಹೋಗಬೇಡಿ. ಯಾವ ತಾಲ್ಲೂಕಿನಲ್ಲಿ ರಾಜಕೀಯ ನಡೆದಿದೆ, ಆ ತಾಲ್ಲೂಕಿನಲ್ಲಿ 300 ವಿದ್ಯಾರ್ಥಿಗಳು ಸಿಗುವ ಸ್ಥಳವನ್ನು ಬಿಟ್ಟು 12 ವಿದ್ಯಾರ್ಥಿಗಳಿರುವ ಸ್ಥಳಕ್ಕೆ ಹಾಕಿದ್ದಾರೆ. ಆ ಸಂದರ್ಭದಲ್ಲಿ ಆ ತಾಲ್ಲೂಕಿನಲ್ಲಿ . .

ಅಧ್ಯಕ್ಷರು:– ಯಾರೋ ನಿಮ್ಮಂತಹವರು ಹೇಳಿರುತ್ತಾರೆ. ಅದಕ್ಕೆ ಹಾಕಿರುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ದಯವಿಟ್ಟು ಆ ತಾಲ್ಲೂಕಿನಲ್ಲೇ ಹಾಕಬೇಕು.

ಶ್ರೀ ಕಿಮ್ಮನೆ ರತ್ನಾಕರ್:– ನಾವು ಅದನ್ನು ಸರಿಪಡಿಸುವಂತ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕರೆ, Pre University education ಆ stage ನಲ್ಲಿ ಹೆಣ್ಣುಮಕ್ಕಳು ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿರುವ ಬಡ ಹೆಣ್ಣುಮಕ್ಕಳು ಹಾಗೂ ಮೂಲಭೂತ ಸೌಲಭ್ಯ ಇಲ್ಲದೇ ದೂರ ಪ್ರದೇಶಗಳಿಂದ ಬಂದವರು drop out ಆಗುತ್ತಾರೆ. ಈ drop out arrest ಮಾಡಲಿಕ್ಕೆ 10+2=12 ಅನ್ನು fundamental rights, Right to Education Right ಮಾಡಲು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ಮಾಡಿದರೆ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಸಹಾಯವಾಗುತ್ತದೆಂದು ನಾನು ತನ್ಮೂಲಕ ಸಚಿವರಲ್ಲಿ ಮತ್ತು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಎಸ್.ಪಾಟೀಲ್:– ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಭಾಗದಲ್ಲಿ ಬಿಡಿ. ಉತ್ತರ ಕರ್ನಾಟಕದ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಇಲ್ಲ. ತಾವು ಮೆಡಿಕಲ್ ಕಾಲೇಜುಗಳನ್ನು ಮಾಡುತ್ತೇವೆಂದು ದೊಡ್ಡ ದೊಡ್ಡ ಮಾತುಗಳನ್ನಾಡುತ್ತೀರಿ. ಮೆಡಿಕಲ್ ಕಾಲೇಜಿಗೆ admission ಆಗಬೇಕಾದರೆ, ಅವರು ಪಿ.ಯು.ಸಿ ಪಾಸ್ ಆಗಲೇಬೇಕಲ್ಲ. ಪಿ.ಯು.ಸಿ ಕಾಲೇಜಿನಲ್ಲಿ ವಿಜ್ಞಾನ ಇಲ್ಲದೆ ಇದ್ದರೆ ಹೇಗೆ? ತಾವು ಕೇವಲ ಕಲಾ ವಿಭಾಗಕ್ಕೆ ಮಾತ್ರ ಹೆಚ್ಚು ಒತ್ತು ಕೊಡಬೇಡಿ. ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿಗೂ ಹೆಚ್ಚು ಒತ್ತು ಕೊಡಿ. ಉತ್ತರ ಕರ್ನಾಟಕದಲ್ಲಿ ಎಲ್ಲಿ ಪಿ.ಯು.ಕಾಲೇಜುಗಳು ಕಡಿಮೆ ಇವೆ, ಅಲ್ಲಿ ಹೆಚ್ಚು ಒತ್ತು ಕೊಟ್ಟು, ಈ ಬಜೆಟ್ ನಲ್ಲಿ ಸ್ವಲ್ಪವಾದರೂ ಮಾಡಿ ಮತ್ತು ಮುಂದಿನ ಬಜೆಟ್‌ನಲ್ಲಿ ಹೆಚ್ಚು ಒತ್ತನ್ನು ಕೊಟ್ಟು ಮಾಡಿ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ಮುಂದಿನ ವರ್ಷದಲ್ಲಿ ತೆಗೆದುಕೊಳ್ಳುವುದಕ್ಕೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಹ ಸಮ್ಮತಿ ಕೊಟ್ಟಿದ್ದಾರೆ. ಹಾಗಾಗಿ, ಮುಂದಿನ ವರ್ಷದಲ್ಲಿ ಅದನ್ನು ಮಾಡುತ್ತೇವೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳು drop out ಆಗುತ್ತಿದ್ದಾರೆ. ಅದೇ ಅವರ ಜೀವನಕ್ಕೆ ಆಧಾರ. ಆದ್ದರಿಂದ 11 ಮತ್ತು 12 ಅನ್ನು fundamental rights ಮಾಡುವುದಕ್ಕೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬೇಕು.

ಅಧ್ಯಕ್ಷರು:– ಮಾನ್ಯ ಸಚಿವರೆ, ಅದನ್ನು ಮಾಡಿ. ಅದನ್ನು ಮಾಡುವುದಕ್ಕೆ ನಿಮಗೆ ಏನು ತೊಂದರೆ?

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, drop out ವಿಚಾರ ಇನ್ನೊಂದು ವಿಷಯವಾಗುತ್ತದೆ. ಅದು ತುಂಬಾ elaborate ಇದೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ಈಗ Compulsory Education ಬಂದಿದೆಯಲ್ಲಾ, ಅದನ್ನು ಪಿ.ಯು.ಸಿ ಯವರೆಗೂ ವಿಸ್ತರಿಸಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು:– ಆಯಿತು.

ಶ್ರೀ ಸಿ.ಎಸ್.ನಾಡಗೌಡ:– ಮಾನ್ಯ ಅಧ್ಯಕ್ಷರೆ, ನನ್ನ ಒಂದು ಪ್ರಶ್ನೆ ಉಳಿದು ಹೋಗಿದೆ.

ಅಧ್ಯಕ್ಷರು:– ಆಯಿತು. ನಂತರ ತೆಗೆದುಕೊಳ್ಳೋಣ. ಶ್ರೀಮತಿ ಶಶಿಕಲಾ ಜೊಲ್ಲೆ, ಇಲ್ಲ. ಅನಿಲ್ ಲಾಡ್, ಇಲ್ಲ. ಅಪ್ಪಚ್ಚು ರಂಜನ್, ಇಲ್ಲ. ಚಿಕ್ಕಮಾದು, ಇಲ್ಲ. ಮುನಿರಾಜು, ಇಲ್ಲ. ಶೀಮತಿ ರಾಮಕ್ಕ.ವೈ, ಕಾಲಾವಕಾಶ ಕೇಳಿದ್ದಾರೆ, ಉಮೇಶ್ ಕತ್ತಿ, ಇಲ್ಲ. ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್.